ತನ್ನನ್ನು ನೋಡಿದರೆ ಪತ್ನಿ ಹೇಗೆ ಪ್ರತಿಕ್ರಿಯಿಸಬಹುದು ಎಂಬ ಆತಂಕ ಮನಸ್ಸಿನಲ್ಲಿ ಹುಟ್ಟಿತು. ಭಾರೀ ಲಗೇಜಿನೊಂದಿಗೆ ಟ್ಯಾಕ್ಸಿಯಲ್ಲಿ ಬಂದಿಳಿಯಬಹುದೆಂದು ನಿರೀಕ್ಷಿಸಿದ್ದ ಪತ್ನಿ ಮತ್ತು ಮಕ್ಕಳ ಮುಂದೆ ಹೀಗೆ ಒದ್ದೆಮುದ್ದೆಯಾಗಿ ಬರಿಗೈಯಲ್ಲಿ ಹಿಂತಿರುಗಿರುವುದು ನಿರಾಸೆಯ ಆಳಕ್ಕೆ ಅವರನ್ನು ದೂಡುತ್ತದೆ! ಅನುಮಾನವೇ ಇಲ್ಲ! ತನ್ನ ಮೊದಲ ವಿದೇಶ ಪ್ರಯಾಣ ಹೀಗೆ ಕೊನೆಯಾಗಬೇಕೆ? ಎಂತಹ ದುರಂತ! ಆದರೆ ನಡೆದದ್ದು ಹೇಳಿದರೆ, ಬದುಕಿ ಬಂದಿದ್ದಕ್ಕೆ ಅವರು ಖಂಡಿತಾ ಖುಷಿಪಡುತ್ತಾರೆ!

ಮನೆಯ ಹತ್ತಿರ ಬಂದಾಗ ದೇವರಾಜುಗೆ ಅಚ್ಚರಿ ಕಾದಿತ್ತು. ಮನೆಯ ಲೈಟುಗಳು ಉರಿಯುತ್ತಿದ್ದವು! ಮನೆಯ ಮುಂದೆ ಐದಾರು ಕಾರುಗಳು, ಹತ್ತಿಪ್ಪತ್ತು ಸ್ಕೂಟರು, ಮೋಟಾರ್‌ಬೈಕುಗಳು ನಿಂತಿದ್ದವು. ಮನೆಯ ಮುಂಬಾಗಿಲು ತೆಗೆದಿತ್ತು. ಏನಾಗಿದೆ? ಏಕೆ ತನ್ನ ಮನೆಯ ಮುಂದೆ ಇಷ್ಟೊಂದು ವಾಹನಗಳು? ಕೆಲವು ಕಾರುಗಳ ಗುರುತು ಅವರಿಗಿತ್ತು. ಅವರ ಕಾರ್ಖಾನೆಯ ಸಿಇಓ, ಡಿಪಾರ್ಟ್‌ಮೆಂಟಿನ ಬಾಸು, ಮತ್ತು ಅಣ್ಣ ಆನಂದನ ಕಾರು ಗುರುತು ಸಿಕ್ಕವು! ಇವರೆಲ್ಲಾ ಇಲ್ಲಿಗೇಕೆ ಈ ಹೊತ್ತಿನಲ್ಲಿ ಬಂದಿದ್ದಾರೆ? ಪತ್ನಿಗೆ ಏನಾದರೂ ತೊಂದರೆಯಾಗಿರಬಹುದೆ? ಇಲ್ಲ, ಮಕ್ಕಳಲ್ಲಿ ಯಾರಾದರೊಬ್ಬರಿಗೆ? ಛೆ... ಹಾಗೇನೂ ಆಗಿರಲಾರದು! ಹಾಗಾಗಲೂಬಾರದು. ಮನೆಯ ಗೇಟಿನ ಬಳಿಗೆ ಬಂದಾಗ ಬಾಗಿಲಲ್ಲಿ ಪಕ್ಕದ ಮನೆಯ ಭೀಮರಾಯರು ನಿಂತಿದ್ದರು! ಅವರನ್ನು ಸರಿಸಿ ಮನೆ ಪ್ರವೇಶಿಸಿದ ದೇವರಾಜುಗೆ ಒಳಗಿನ ದೃಶ್ಯ ಕಂಡು ಬವಳಿ ಬಂದಂತಾಯಿತು! ಪತ್ನಿ ಇಬ್ಬರು ಮಕ್ಕಳನ್ನು ತಬ್ಬಿಕೊಂಡು ಅಳುತ್ತಿದ್ದಳು. ಭೀಮರಾಯರ ಹೆಂಡತಿ ಸಮಾಧಾನ ಮಾಡುತ್ತಿದ್ದರು. ಕಾರ್ಖಾನೆಯ ಸಿಇಓ ಕೈಕಟ್ಟಿ ನಿಂತಿದ್ದರು! ತನ್ನ ಬಾಸ್ ಏನನ್ನೋ ಹೇಳುತ್ತಿದ್ದರು. ಪತ್ನಿ ಆಗಾಗ್ಗೆ ಕತ್ತೆತ್ತಿ ಅವರನ್ನು ನೋಡುತ್ತಿದ್ದಳು. ಆದರೆ, ಏಕೆ? ಏನಾಗಿದೆ? ಯಾವ ಕಾರಣಕ್ಕೆ ಈ ದುಃಖ!? ಮಕ್ಕಳು ಚೆನ್ನಾಗಿದ್ದಾರೆ! ಪತ್ನಿ ಸರಿಯಾಗಿದ್ದಾಳೆ! ಮತ್ತೇನು?

"ಯಾವುದೂ ನಮ್ಮ ಕೈಯಲಿಲ್ಲ! ಅವರು ಜರ್ಮನಿಗೆ ಹೋಗಿದ್ದಕ್ಕೇ ಹೀಗಾಗಿದೆ ಅಂತ ಹೇಳೋಕಾಗೊಲ್ಲ. ನಿನ್ನೆ ರಾತ್ರಿ ಅಪಾರ್ಟ್‌ಮೆಂಟು ಕುಸಿದು ನೂರಿಪ್ಪತ್ತು ಜನ ಸತ್ತಿದ್ದಾರೆ! ಸಾವು ನಮ್ಮ ಕೈಯಲಿಲ್ಲ!" ಡಿಪಾರ್ಟ್‌ಮೆಂಟ್ ಬಾಸು ಹೇಳುತ್ತಿದ್ದರು.

ದೇವರಾಜುಗೆ ಆ ಮಾತು ಕೇಳಿ ಅಚ್ಚರಿ! 'ಜರ್ಮನಿಗೆ ಹೋಗಿದ್ದಕ್ಕೇ ಹೀಗಾಗಿದೆ...' ಎಂದರೆ? ವಿಮಾನ ಅಪಘಾತದ ಸುದ್ದಿ ಇವರಿಗಾಗಲೇ ಮುಟ್ಟಿದೆಯೆ?

"ಈ ತರಹದ ದುರಂತ ಇತ್ತೀಚಿನ ಹತ್ತು ವರ್ಷಗಳಲ್ಲಿ ಒಂದೂ ಆಗಿರಲಿಲ್ಲ! ದುರಾದೃಷ್ಟ! ವಿಮಾನಕ್ಕೆ ಸಿಡಿಲು ಕೂಡ ಬಡಿಯಿತಂತೆ! ಜೊತೆಗೆ ಈ ಕೆಟ್ಟ ಮಳೆ! ಇದು ಪ್ರಕೃತಿಯ ವಿಕೋಪ! ಬಾಡಿ ತರೋದಕ್ಕೆ ನಮ್ಮ ಕಂಪೆನಿಯವರು ಆಗಲೇ ಏರ್‌ಪೋರ್ಟಿನಲ್ಲಿದ್ದಾರೆ..."

ಸಿಇಓ ಹೇಳಿದರು.

ಓಹೋ... ವಿಮಾನಕ್ಕೆ ಸಿಡಿಲು ಬೇರೆ ಬಡಿದಿದೆ!! ಅದಕ್ಕೇ ಆ ಅಪಘಾತ! ಆದರೆ, ಯಾರ ಬಾಡಿ ಬಗ್ಗೆ ಇವರು ಮಾತಾಡ್ತಿರೋದು? ಕಾರ್ಖಾನೆ ಕಡೆಯಿಂದ ಹೋಗಿದ್ದವನು ನಾನೊಬ್ಬನೇ? ಅಂದರೆ ನಾನು ಸತ್ತಿರುವೆನೆಂದು ತಿಳಿದಿದ್ದಾರೆಯೆ?...

ತಕ್ಷಣ ದೇವರಾಜು ಅವರ ಮುಂದೆ ಹೋಗಿ ನಿಂತರು!

"ಸಾರಿ ಸರ್. ನೀವು ತಪ್ಪು ತಿಳಿದಿದ್ದೀರಿ. ಐಯಾಮ್ ವೆರಿ ಲಕ್ಕೀ... ಬದುಕಿ ಬಂದಿದ್ದೀನಿ... ಇದು ಎರಡನೆ ಜನ್ಮ ನನಗೆ!" ಎಂದರು. ಮತ್ತೆ ಮಡದಿಯ ಕಡೆಗೆ ತಿರುಗಿ "ಜಾನಕಿ, ನಾನು